

ಪ್ರತಿಮೆ, ಸ್ತೂಪಗಳು ಮನೋಹರವಾಗಿವೆ. ಕಲ್ಲಿನ ಛಾವಣಿಯಂತೂ ಮರದಿಂದ ನಿರ್ಮಿತವಾದದ್ದೋ ಅನ್ನುವಷ್ಟು ಸುಂದರ. ಅದಕ್ಕೇ ಇರಬೇಕು, ಈ ಗುಹೆಗೆ ವಿದೇಶಿ ಪ್ರವಾಸಿಗರು 'ಕಾರ್ಪೆಂಟರ್ ಕೇವ್' ಎಂಬ ಹೆಸರಿಟ್ಟಿರುವುದು. ತೀನ್ ತಲ್ ಎನ್ನುವ ಹನ್ನೆರಡನೇ ಗುಹೆ, ಹೊರಗಿನಿಂದ ಪಾಠಶಾಲೆಯಂತೆ ಕಂಡರೂ ಒಳಹೊಕ್ಕು ನೋಡಿದರೆ ವಾಸ್ತುಶಿಲ್ಪ ವಿನ್ಯಾಸದ ನೈಪುಣ್ಯತೆಯ ಪರಾಕಾಷ್ಠೆ. ಈ ಮೂರು ಅಂತಸ್ತಿನ ಬೌದ್ಧರ ವಿಹಾರದಲ್ಲಿ ಭಿಕ್ಷುಗಳು ವಾಸಿಸುವ, ಮಲಗುವ ಕೋಣೆಗಳು, ಅಡುಗೆಮನೆ, ವಿಸ್ತಾರವಾದ ಭೋಜನಶಾಲೆ ಮತ್ತು ಗರ್ಭಗೃಹಗಳಿವೆ. ಮೇಲಿನ ಅಂತಸ್ತುಗಳ ಕಲಾವೈಭವ ಸಾಟಿಯಿಲ್ಲದ್ದು.

ಮೂವತ್ತೆರಡು ಮತ್ತು ಮೂವತ್ತಮೂರನೆಯ ಗುಹೆಗಳನ್ನು ಕ್ರಮವಾಗಿ ಇಂದ್ರಸಭಾ ಮತ್ತು ಜಗನ್ನಾಥ ಸಭಾ ಎನ್ನುತ್ತಾರೆ. ಇವು ನೋಡಲೇಬೇಕಾದ ಜೈನರ ದೇವಾಲಯಗಳು. ಇವು ಬೌದ್ಧ ಮತ್ತು ಹಿಂದೂ ಗುಹೆಗಳ ನಂತರದಲ್ಲಿ ನಿರ್ಮಾಣವಾದವು. ಇಲ್ಲಿನ ಗೋಡೆಗಳಲ್ಲಿ, ಛಾವಣಿಯಲ್ಲಿ ಚಿತ್ರಕಲೆಯ ಸೌಂದರ್ಯ ಇನ್ನೂ ಮಾಸಿಲ್ಲ. ಜೈನ ಪುರಾಣಗಳ ಕಥಾಚಿತ್ರಗಳು, ಮಹಾವೀರ ಮತ್ತು ಪಾರ್ಶ್ವನಾಥರ ಅದ್ಭುತ ಪ್ರತಿಮೆಗಳು ನೋಡುವಂತದ್ದು.

ಧುಮರ್ ಲೇನಾ ಎಂದು ಕರೆಯುವ ಇಪ್ಪತ್ತೊಂಬತ್ತನೇ ಗುಹೆ ಅತ್ಯಂತ ಹಳೆಯದಾದ ಮತ್ತು ದೊಡ್ಡದಾದ ಶಿವ ದೇವಾಲಯ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಎಲ್ಲ ಕಡೆ ಬೃಹತ್ ಯಜ್ಞಕುಂಡಗಳನ್ನು ಕಾಣಬಹುದು. ಅಂಧಕಾಸುರ ವಧೆ, ಶಿವಪಾರ್ವತಿ ಕಲ್ಯಾಣ ಮೊದಲಾದ ಶಿವಪುರಾಣದ ಕಥೆಗಳನ್ನು ಹೇಳುವ ಶಿಲ್ಪಗಳು ಗೋಡೆಯನ್ನಲಂಕರಿಸಿವೆ.

ಅತ್ಯದ್ಭುತವಾದ ಹದಿನಾರನೆಯ ಗುಹೆಯೇ ಕೈಲಾಸ ದೇವಾಲಯ. ಇಲ್ಲಿ ಕಣ್ಣುಗಳು, ಮಾತುಗಳು ಸೋಲುತ್ತವೆ. ಇದು ಜಗತ್ತಿನ ಅತಿದೊಡ್ಡದಾದ ಏಕಶಿಲಾ ನಿರ್ಮಾಣ. ಇಂಥದ್ದೊಂದು ಊಹಾತೀತವಾದ ರಚನೆ ಸಾಧ್ಯವಾಗಲು ಪರಿಣಿತ ಶಿಲ್ಪಿಗಳು ಮತ್ತು ನುರಿತ ತಂತ್ರಜ್ಞರ ಮಹಾಸಂಗಮ ಆಗಿರಬೇಕು. ರಾಷ್ಟ್ರಕೂಟ ರಾಜ ಒಂದನೆಯ ಕೃಷ್ಣನಿಂದ ಎಂಟನೇ ಶತಮಾನದಲ್ಲಿ ನಿರ್ಮಿತವಾದ ಈ ದೇಗುಲದ ಗೋಪುರ ಕೈಲಾಸ ಪರ್ವತದಿಂದ ಪ್ರೇರಿತವಾಗಿರುವುದರಿಂದ, 'ಕೈಲಾಸನಾಥ ದೇವಾಲಯ' ಎಂದೇ ಕರೆಯಲಾಗುತ್ತದೆ. ಒಂದೇ ಒಂದು ಶಿಲೆಯಲ್ಲಿ ಕಡೆದು ನಿಲ್ಲಿಸಿದ ಬಹುಸ್ತರದ ದೇವಾಲಯ ಇನ್ನೂರು ಅಡಿಗಳಷ್ಟು ಉದ್ದವಾಗಿದ್ದು, ಸುಮಾರು ನೂರಾ ಏಳು ಅಡಿಗಳಷ್ಟು ಎತ್ತರವಿದೆ. ವಿವಿಧ ದೇವತೆಗಳ ಮುಖಮಂಟಪಗಳು, ಧ್ವಜಸ್ಥಂಭಗಳು, ವಿಶಾಲವಾದ ಪ್ರಾಂಗಣ, ಗರ್ಭಗೃಹ, ದೇವತೆಗಳ ಸುಂದರ ವಿಗ್ರಹಗಳು, ರಾಮಾಯಣ ಮತ್ತು ಮಹಾಭಾರತದ ಕಥೆಗಳಿಂದ ಅಲಂಕೃತವಾದ ಶಿಲಾಫಲಕಗಳು, ಜೀವತಳೆದಂತಿರುವ ಆನೆಗಳು, ಗೋಪುರಗಳು, ಪ್ರವೇಶ ದ್ವಾರ, ಮೆಟ್ಟಿಲುಗಳು... ಒಂದಿಷ್ಟೂ ಕುಂದಿಲ್ಲದ ವಿನ್ಯಾಸ, ಬೆಣ್ಣೆಯಲ್ಲಿ ಕಡೆದಷ್ಟು ಸೊಬಗು. ಶಿವನ ತಪಸ್ಸು, ತಾಂಡವ ಮತ್ತು ಕಲ್ಯಾಣಗಳ ಶಿಲ್ಪಗಳಂತೂ ಸಹೃದಯರ ಮನಸೂರೆಗೊಳ್ಳುತ್ತವೆ.

ಬಹಳಷ್ಟು ವಿಗ್ರಹಗಳು ಮತ್ತು ಶಿಲಾ ರಚನೆಗಳು ಕಾಲನ ಮತ್ತು ದಾಳಿಕೋರರ ದಾಳಿಯಿಂದ ಭಗ್ನಗೊಂಡಿದ್ದರೂ ದೇಗುಲದ ಒಟ್ಟಾರೆ ಸೌಂದರ್ಯಕ್ಕೆ ಇನಿತೂ ಧಕ್ಕೆಯಾಗಿಲ್ಲ. ಇಲ್ಲಿ ಪಲ್ಲವ ಮತ್ತು ಚಾಲುಕ್ಯ ಶೈಲಿಯ ಪ್ರಭಾವ ಕಾಣುತ್ತದೆಯಾದರೂ ಹೆಚ್ಚಿನ ಹೋಲಿಕೆ ನಮ್ಮ ಹಂಪೆಯ ವಿರೂಪಾಕ್ಷ ದೇವಾಲಯದ್ದು. ಎರಡು ಮಂಟಪಗಳ ನಡುವಿನ ಕಲ್ಲಿನ ಸೇತುವೆಯಂತೂ ಬೇರೆಲ್ಲೂ ಕಾಣದ ಒಂದು ಅಚ್ಚರಿಯೇ ಸರಿ. ಮಂದಿರದ ಎಡಗಡೆಯಲ್ಲಿ ಶಿವನ ಮಹಿಮೆ ಸಾರುವ ವಿಗ್ರಹಗಳು ಮತ್ತು ಬಲಭಾಗದಲ್ಲಿ ವಿಷ್ಣುವಿಗೆ ಸಂಬಂಧಪಟ್ಟ ರಚನೆಗಳಿದ್ದು, ಅಲ್ಲೂ ಸಮನ್ವಯದ ಪಾಠ ಹೇಳುವಂತಿವೆ.

ದೇವಾಲಯದ ಮೇಲಿನ ಬೆಟ್ಟದಲ್ಲಿ ನಿಂತು ನೋಡಿದಾಗ ನಿರ್ಮಾಣದ ಅಗಾಧತೆಯ ಅರಿವಾಗುತ್ತದೆ. ಎರಡು ಲಕ್ಷ ಘನ ಮೀಟರುಗಳಷ್ಟು ಬಸಾಲ್ಟ್ ಶಿಲೆಯನ್ನು ಕೇವಲ ಉಳಿ ಮತ್ತು ಸುತ್ತಿಗೆಯನ್ನು ಬಳಸಿ ಚೂರು ಚೂರಾಗೇ ಮಣಿಸಿ ಗೋಪುರದಿಂದ ಅಧೋಮುಖವಾಗಿ ನಿಖರವಾಗಿ ವಿನ್ಯಾಸ ಮಾಡಿ, ಅಷ್ಟು ಮನಮೋಹಕವಾದ, ಭವ್ಯವಾದ ಮಂದಿರ ಕಟ್ಟಿ ನಿಲ್ಲಿಸಿದ ಆ ಕಾಲದ ಇಂಜಿನಿಯರ್‌ಗಳು ಮತ್ತು ಶಿಲ್ಪಿಗಳ ಕೈಚಳಕಕ್ಕೆ ತಲೆ ತಾನೇತಾನಾಗಿ ಬಾಗುತ್ತದೆ. ನಮ್ಮ ಇಂದಿನ ತಂತ್ರಜ್ಞರೂ ಇಂಥದೊಂದು ವಿಸ್ಮಯ ಕೇವಲ ಹದಿನೆಂಟು ವರ್ಷಗಳಲ್ಲಿ ಸಾಧ್ಯವಾದದ್ದು ಎಂದರೆ ನಂಬಲು ತಯಾರಿಲ್ಲ. ಯುನೆಸ್ಕೋದ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿರುವ ಈ ಕಲಾಕೃತಿ ಸಮುಚ್ಚಯ ಜಗತ್ತಿನ ಅದ್ಭುತಗಳ ಸಾಲಿನಲ್ಲಿ ಇನ್ನೂ ಸೇರದೇ ಇರುವುದು ಆಶ್ಚರ್ಯಕರ.

ಮಹಾನ್ ಶಿಲ್ಪಿ, ಮೈಕೆಲ್ ಏಂಜೆಲೋನನ್ನು ಅವನ ಶಿಲ್ಪಕಲಾ ನೈಪುಣ್ಯದ ಬಗ್ಗೆ ಯಾರೋ ಕೇಳಿದಾಗ ಹೇಳಿದ ಮಾತು: 'ನನಗೆ ಅಮೃತಶಿಲೆಯನ್ನು ನೋಡಿದಾಗ ಅದರಲ್ಲಿ ಬಂಧಿಯಾದ ದೇವತೆ ಕಾಣಿಸುತ್ತಾಳೆ. ಅವಳನ್ನು ಬಂಧಮುಕ್ತಗೊಳಿಸುವವರೆಗೂ ಶಿಲೆಯನ್ನು ಕೆತ್ತುತ್ತಲೇ ಇರುತ್ತೇನೆ'. ಎಲ್ಲೋರಾದಲ್ಲಿ ಆದದ್ದೂ ಅಂಥ ಬಿಡುಗಡೆಯೇ.

**ಪ್ರತಿಕ್ರಿಯಿಸಿ: feedback@sudha.co.in**